AMBEDKAR
DEVELOPMENT CORPORATION



# ಡಾ|| ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

# Dr. B.R. Ambedkar Development Corporation Limited







## 38ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿ

## 38th Annual Report & Auditor's Report

*2012-13*

# ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

## ವಿಷಯ ಸೂಚಿ


| ಕ್ರ. ಸಂ. | ವಿವರಗಳು | ಪುಟ |
|---|---|---|
| 01. | ಮಂಡಳಿಯ ನಿರ್ದೇಶಕರು ಮತ್ತು ಸಾಮಾನ್ಯ ವಿವರಗಳು | 2 |
| 02. | 38ನೇ ವಾರ್ಷಿಕ ಮಹಾಸಭೆಯ ಸೂಚನೆ | 3 |
| 03. | 31-03-2013ಕ್ಕೆ ಕೊನೆಗೊಂಡಂತೆ ಸದಸ್ಯರಿಗೆ ಅನುಬಂಧಗಳೊಡನೆ ನಿರ್ದೇಶಕರ ವರದಿ | 4 |
| 04. | ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರಿಂದ ಲೆಕ್ಕಗಳ ಮೇಲಿನ ವ್ಯಾಖ್ಯೆಯಿಲ್ಲದ ಪ್ರಮಾಣಪತ್ರ | 16 |
| 05. | ಷೇರುದಾರರಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿ | 17 |
| 06. | 31-03-2013ರಲ್ಲಿದ್ದಂತೆ ಸ್ಥಿತಿ ವಿವರಣ ಪತ್ರ | 26 |
| 07. | 31-03-2013ಕ್ಕೆ ಕೊನೆಗೊಂಡಂತೆ ಲಾಭ ಮತ್ತು ನಷ್ಟದ ತಃಖ್ತೆ | 28 |
| 08. | 31-03-2013ಕ್ಕೆ ಕೊನೆಗೊಂಡಂತೆ ನಗದು ಹರಿವು ಪಟ್ಟಿ | 30 |
| 09. | 31-03-2013ಕ್ಕೆ ಕೊನೆಗೊಂಡಂತೆ ಲೆಕ್ಕಗಳ ಕಾರ್ಯನೀತಿಗಳು ಮತ್ತು ಟಿಪ್ಪಣಿಗಳು | 32 |

# ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

## ಮಂಡಳಿಯ ನಿರ್ದೇಶಕರು / ಕಾರ್ಯಕಾರಿ ಸಮಿತಿ

### 2012-13ನೇ ವಾರ್ಷಿಕ ವರದಿ ಸಾಲಿನ ನಿಗಮದ ಕಾರ್ಯಕಾರಿ ಮಂಡಳಿಯ ನಿರ್ದೇಶಕರುಗಳು

| | |
|---|---|
| **ಶ್ರೀ ಹೆಚ್. ಆಂಜನೇಯ**<br>ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ<br>ಕಲ್ಯಾಣ ಇಲಾಖೆಯ ಗೌರವಾನ್ವಿತ ಮಂತ್ರಿಗಳು | ಅಧ್ಯಕ್ಷರು |
| **ಶ್ರೀ ಎ.ಆರ್. ಕೃಷ್ಣಮೂರ್ತಿ** | ಅಧ್ಯಕ್ಷರು (27-05-2013ರ ವರೆಗೆ) |
| **ಶ್ರೀ ಇ. ವೆಂಕಟಯ್ಯ**, ಭಾ.ಆ.ಸೇ.<br>ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | ನಿರ್ದೇಶಕರು |
| **ಶ್ರೀ ಎಸ್.ಎನ್. ಜಯರಾಂ**, ಐ.ಎ.ಎಸ್.<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ನಿರ್ದೇಶಕರು |
| **ಶ್ರೀ ನವೀನ್ ರಾಜ್ ಸಿಂಗ್**, ಐ.ಎ.ಎಸ್.<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ನಿರ್ದೇಶಕರು (19-08-2013ರ ವರೆಗೆ) |
| **ಡಾ|| ಆರ್. ರಾಜು**, ಐ.ಎಫ್.ಎಸ್. | ವ್ಯವಸ್ಥಾಪಕ ನಿರ್ದೇಶಕರು |
| **ಶ್ರೀ ಕೆ.ಎಸ್. ಮೃತ್ಯುಂಜಯ** | ವ್ಯವಸ್ಥಾಪಕ ನಿರ್ದೇಶಕರು (01-03-2013ರ ವರೆಗೆ) |
| **ಶ್ರೀ ಎಂ.ಎಸ್. ಶಿವರಾಂ**<br>ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ | ನಿರ್ದೇಶಕರು |
| **ಶ್ರೀ ನಾಗರಾಜ್ ಚೌಹಾನ್**<br>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | ನಿರ್ದೇಶಕರು |
| **ಶ್ರೀ ಎಂ.ಎ. ಹುಸೇನ್**<br>ಉಪ ಕಾರ್ಯದರ್ಶಿ, ಸಾ. ಉ.ಇ. | ನಿರ್ದೇಶಕರು |
| **ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು**<br>ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಹಣಕಾಸು<br>ಮತ್ತು ಅಭಿವೃದ್ಧಿ ನಿಗಮ ನಿಯಮಿತ, ನವದೆಹಲಿ | ನಿರ್ದೇಶಕರು |
| **ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ**<br>ಭಾರತ ಸರ್ಕಾರ, ನವದೆಹಲಿ ಇದರ ಪ್ರತಿನಿಧಿಗಳು | ನಿರ್ದೇಶಕರು |

| | | |
|---|---|---|
| ಲೆಕ್ಕ ಪರಿಶೋಧಕರು | : | **ಎಂ.ಎ. ನರಸಿಂಹನ್ ಮತ್ತು ಕಂ.,**<br>ಲೆಕ್ಕ ಪರಿಶೋಧಕರು,<br>ನಂ.25, 1ನೇ ಮಹಡಿ, 7ನೇ ಕ್ರಾಸ್,<br>ಮಲ್ಲೇಶ್ವರಂ, ಬೆಂಗಳೂರು - 560 003 |
| ಬ್ಯಾಂಕರ್‌ಗಳು | : | **ಇಂಡಿಯನ್ ಬ್ಯಾಂಕ್**, ಶೇಷಾದ್ರಿಪುರಂ ಶಾಖೆ, ಬೆಂಗಳೂರು<br>9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ<br>ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001 |
| ನೋಂದಾಯಿತ ಕಚೇರಿ | : | **ಸ್ಟೇಟ್ ಬ್ಯಾಂಕ್ ಆಫ್ ಮೈಸೂರು**<br>ಅಂಬೇಡ್ಕರ್ ವೀಧಿ ಶಾಖೆ, ಬೆಂಗಳೂರು |

# ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560 001

## ಸೂಚನೆ

ನಿಗಮದ 38ನೇ ಷೇರುದಾರರ ವಾರ್ಷಿಕ ಮಹಾ ಸಭೆಯನ್ನು ದಿ: 27 ಸೆಪ್ಟೆಂಬರ್ 2013ರಂದು ಮಧ್ಯಾಹ್ನ 2.30 ಗಂಟೆಗೆ ಡಿ. ದೇವರಾಜು ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದ್ದು, ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

1. ದಿ: 31-03-2013ರ ಅಂತ್ಯದ ನಿರ್ದೇಶಕರ ಮತ್ತು ಲೆಕ್ಕಪರಿಶೋಧಕರ ವರದಿ ಹಾಗೂ ಕಂಪೆನಿ ಕಾಯಿದೆ 1956ರ ಕಲಂ 619 (4) ರನ್ವಯ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ನೀಡಿರುವ ಸರ್ಟಿಫಿಕೇಟ್, ಲಾಭ ಮತ್ತು ನಷ್ಟಗಳ ವಿವರ ಮತ್ತು ಬ್ಯಾಲೆನ್ಸ್ ಶೀಟನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅನುಮೋದಿಸುವುದು.
2. ಕಂಪೆನಿ ಕಾಯಿದೆ 1956ರ ಕಲಂ 224(8) ಎ.ಎ. ಉಪಬಂಧದಡಿ ನೇಮಿಸಲ್ಪಟ್ಟ ಶಾಸನಬದ್ಧ ಲೆಕ್ಕ ಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸುವುದು.

ಮಂಡಳಿಯ ಆದೇಶದ ಮೇರೆಗೆ

ಸ್ಥಳ : ಬೆಂಗಳೂರು
ದಿನಾಂಕ : 27-08-2013

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

**ಸೂಚನೆ :**

1. ಸಭೆಗೆ ಹಾಜರಾಗಿ ಮತದಾನ ಮಾಡಲು ಹಕ್ಕಿರುವ ಸದಸ್ಯರು ತಮಗೆ ಬದಲಾಗಿ ಹಾಜರಾಗಿ ಮತ ನೀಡಲು ಒಬ್ಬ ಪ್ರತಿನಿಧಿಯನ್ನು ನೇಮಿಸಬಹುದು ಮತ್ತು ಅಂತಹ ಪ್ರತಿನಿಧಿಯು ಸಂಸ್ಥೆಯ ಸದಸ್ಯನಾಗಿರಬೇಕಿಲ್ಲ. ಪ್ರತಿನಿಧಿಗಳಿದ್ದಲ್ಲಿ ಸಭೆ ನಡೆಯುವ 48 ಗಂಟೆಗಳ ಮುಂಚಿತವಾಗಿ ಸಂಸ್ಥೆಯಲ್ಲಿ ದಾಖಲಿಸಿರಬೇಕು.
2. ನಿರ್ದೇಶಕರನ್ನು ನೇಮಿಸುವ ಅಧಿಕಾರಗಳು ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟಿರುತ್ತದೆ.
3. ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾಧಿಕಾರವು ಭಾರತದ ಮಹಾಲೇಖಪಾಲರು ಮತ್ತು ನಿಯಂತ್ರಕರ ಅಧೀನಕ್ಕೊಳಪಟ್ಟಿರುತ್ತದೆ.
4. ಕಂಪೆನಿ ಖಾಯ್ದೆ 1956ರ ಕಲಂ 173 (1)ರ ಅನುಸಾರವಾಗಿ ವಿವರಣಾತ್ಮಕ ಹೇಳಿಕೆಯನ್ನು ಲಗತ್ತಿಸಿದೆ.

ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

# 31ನೇ ಮಾರ್ಚ್ 2013ಕ್ಕೆ ಕೊನೆಗೊಂಡ ವರ್ಷಕ್ಕೆ ಸದಸ್ಯರುಗಳಿಗೆ ನಿರ್ದೇಶಕರುಗಳ ವರದಿ

ನಿಮ್ಮ ನಿರ್ದೇಶಕರುಗಳು 31ನೇ ಮಾರ್ಚ್ 2013ರಲ್ಲಿ ಲೆಕ್ಕ ಪರಿಶೋಧಿತ ಸ್ಥಿತಿ ವಿವರಣಾ ಪತ್ರ ಮತ್ತು 31ನೇ ಮಾರ್ಚ್ 2013ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟ ತಃಖ್ತೆಯ ಜೊತೆಗೆ 38ನೇ ವಾರ್ಷಿಕ ವರದಿಯನ್ನು ಮಂಡಿಸಲು ಹರ್ಷಿಸುತ್ತಾರೆ.

## ಆರ್ಥಿಕ ಫಲಿತಾಂಶಗಳು

ಪರಾಮರ್ಶೆಯಲ್ಲಿರುವ ವರ್ಷಾವಧಿಯಲ್ಲಿ ಉದ್ದೇಶಿತ ಫಲಾನುಭವಿಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಯಿಂದಾಗಿ ಸಾಲ ಮತ್ತು ಬಡ್ಡಿಯ ಒಟ್ಟಾರೆ ವಸೂಲಾತಿಯು ಅಲ್ಪ ಪ್ರಮಾಣವಾದುದರಿಂದ ನಿಗಮದ ಆರ್ಥಿಕ ಕಾರ್ಯಾಚರಣೆಯಲ್ಲಿ ಕನಿಷ್ಠ ಸುಧಾರಣೆಯಾಗಿದೆ. ಒಟ್ಟು ಸಂಚಿತ ಆದಾಯದಲ್ಲಿ ಹಿಂದಿನ ವರ್ಷದಲ್ಲಿ ದಾಖಲಿಸಿದ ರೂ.1490.50 ಲಕ್ಷಗಳಿಗೆ ಹೋಲಿಸಿದರೆ, 2012-13ನೇ ವರ್ಷದಲ್ಲಿ ಫಲಾನುಭವಿಗಳಿಗೆ ನೀಡಿದ ಸಾಲದ ಮೇಲಿನ ಬಡ್ಡಿಯ ಮೂಲಕ ರೂ.1615.72 ಲಕ್ಷಗಳಾಗಿರುತ್ತದೆ. ಉತ್ತಮ ನಿಧಿಯ ನಿರ್ವಹಣೆಯಿಂದಾಗಿ ಬಡ್ಡಿಯ ಆದಾಯದಲ್ಲಿ ಗಣನೀಯ ಏರಿಕೆಯಾಗಿದೆ ಮತ್ತು ಆದರಿಂದ ಹಿಂದಿನ ವರ್ಷದಲ್ಲಿ ಗಳಿಸಿದ ರೂ.1524.13 ಲಕ್ಷಗಳಿಗೆ ಪ್ರತಿಯಾಗಿ ಪ್ರಸಕ್ತ ವರ್ಷದಲ್ಲಿ ಗಳಿಸಿದ ರೂ.2192.25 ಲಕ್ಷಗಳ ಇತರೆ ಆದಾಯವನ್ನು ದಾಖಲಿಸಿದೆ. ರೂ.2632.60 ಲಕ್ಷಗಳ ಆಡಳಿತಾತ್ಮಕ ಮತ್ತು ಆರ್ಥಿಕ ವೆಚ್ಚವನ್ನು ಭರಿಸಿದ ನಂತರ ನಿಗಮವು 2011-12ನೇ ವರ್ಷದಲ್ಲಿ ಸಾಧಿಸಿದ ರೂ.901.35 ಲಕ್ಷಗಳಿಗೆ ಪ್ರತಿಯಾಗಿ 2012-13ನೇ ವರ್ಷದಲ್ಲಿ ರೂ.1225.37 ಲಕ್ಷಗಳ ಲಾಭವನ್ನು ಗಳಿಸಿದೆ. ಮುಂದುವರೆದು, ಕರ್ನಾಟಕ ಸರ್ಕಾರಕ್ಕೆ 31.03.2012ರ ವರೆಗೆ ಪಾವತಿಸಬೇಕಾಗಿದ್ದ ಖಾತರಿ ಕಮಿಷನ್‌ನ್ನು ಸರ್ಕಾರ ಆದೇಶ ಸಂಖ್ಯೆ ಸಕಇ 47 ಎಸ್‌ಡಿಸಿ 2012 ದಿ: 11.01.2013 ರನ್ವಯ ಪುಸ್ತಕದ ಹೊಂದಾಣಿಕೆಯ ಮೂಲಕ ಹೊಂದಾಣಿಕೆ ಮಾಡಿ ಚುಕ್ತಾ ಮಾಡಿರುವುದರಿಂದ ರೂ.830.85 ಲಕ್ಷಗಳನ್ನು ಅಸಾಧಾರಣ ವಸ್ತು ಎಂದು ಪರಿಗಣಿಸಿ, ಅದು ಆದಾಯವಾಗಿರುವುದರಿಂದ ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಪ್ರಸಕ್ತ ವರ್ಷದ ಲಾಭಕ್ಕೆ ಸೇರಿಸಿದ್ದು, ಇದರಿಂದ ಪ್ರಸಕ್ತ ವರ್ಷದ ಲಾಭವು ರೂ.2056.22 ಲಕ್ಷಗಳಿಗೆ ಏರಿಕೆಯಾಗಿದೆ.

ಆರ್ಥಿಕ ಫಲಿತಾಂಶಗಳ ಸಾರಾಂಶವು ಇಂತಿದೆ :

(ರೂ. ಲಕ್ಷಗಳಲ್ಲಿ)

| | 2012-13 | 2011-12 |
|---|---|---|
| ಲಾಭ / ನಷ್ಟ (-) ಬಡ್ಡಿ ಮತ್ತು ಸವಕಳಿಗಿಂತ ಮುಂಚೆ | **1825.40** | 1376.35 |
| ಕಳೆಯಿರಿ: ಬಡ್ಡಿ ಮತ್ತು ಸವಕಳಿ | **600.03** | 475.00 |
| ಲಾಭ / ನಷ್ಟ (-) ವರ್ಷಾವಧಿಗೆ | **1225.37** | 901.35 |
| ಅಸಾಧಾರಣ ವಸ್ತು (ಹಿಂದಿನ ಅವಧಿಯ ಹೊಂದಾಣಿಕೆ) | **830.85** | 0.0 |
| ಲಾಭ / ನಷ್ಟ (-) ಹೊಂದಾಣಿಕೆ ನಂತರ | **2056.22** | 901.35 |
| ಲಾಭ / ನಷ್ಟ (-) ಕಳೆದ ಬ್ಯಾಲೆನ್ಸ್ ಶೀಟ್‌ನಿಂದ ಪಡೆದದ್ದು | **893.55** | 278.05 |
| ಕೂಡಿರಿ: ವರ್ಷದ ಹೆಚ್ಚುವರಿ | **2056.22** | 901.35 |
| ಕಳೆಯಿರಿ: ಶೇ. 20% ಸಾಮಾನ್ಯ ನಿಧಿಗೆ ವರ್ಗಾಯಿಸಿದ್ದು | **(411.24)** | (285.85) |
| ಅಂತಿಮ ಶಿಲ್ಕು | **2538.53** | 893.55 |
| ಒಟ್ಟು ಮೀಸಲು ಮತ್ತು ಹೆಚ್ಚುವರಿ | **3235.62** | 1179.40 |

## ವಿವಿಧ ಯೋಜನೆಯಡಿಯಲ್ಲಿ ಕಾರ್ಯಕ್ಷಮತೆ

2012-13ರ ಅವಧಿಯಲ್ಲಿ ನಿಗಮವು ಈ ಕೆಳಗೆ ವಿವರಿಸಿರುವ ವಿವಿಧ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 49942 ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ನೀಡಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಯ ವಿವರ | ಫಲಾನು ಭವಿಗಳ ಸಂಖ್ಯೆ | ವಿತರಿಸಿದ ಹಣ | | | ಒಟ್ಟು |
|---|---|---|---|---|---|---|
| | | | ಸಹಾಯ ಧನ | ಅಂಚಿನ ಹಣ | ಅವಧಿ ಸಾಲ | |
| 1. | **ಗಂಗಾ ಕಲ್ಯಾಣ ಯೋಜನೆ** | | | | | |
| | ಅ) ವೈಯಕ್ತಿಕ ನೀರಾವರಿ ಕೊಳವೆ ಬಾವಿ | 5900 | 7936.62 | - | 1028.40 | 8965.02 |
| | ಆ) ಸಮುದಾಯ / ಏತ ನೀರಾವರಿ ಯೋಜನೆ | 279 | 175.41 | | - | 175.41 |
| | ಇ) ಕೊಳವೆ ಬಾವಿಗಳ ವಿದ್ಯುದ್ದೀಕರಣ | - | 3000.00 | - | - | 3000.00 |
| 2. | ಭೂಮಿ ಖರೀದಿ ಯೋಜನೆ | 647 | 728.81 | - | 728.81 | 1457.62 |
| 3. | ಸ್ವಯಂ - ಉದ್ಯೋಗ ಯೋಜನೆ | 8123 | 1509.73 | - | - | 1509.73 |
| 4. | ಐ.ಎಸ್.ಬಿ. ಯೋಜನೆ | 1116 | 750.00 | 175.68 | - | 925.68 |
| 5. | ಎನ್.ಎಸ್. ಎಫ್.ಡಿ.ಸಿ. ನೇರ ಸಾಲ ಯೋಜನೆ | 595 | 8.60 | 421.18 | 1365.87 | 1795.65 |
| 6. | ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ | 2397 | 170.40 | 13.65 | 1545.79 | 1729.84 |
| 7. | ಮೈಕ್ರೊ ಸಾಲ ಯೋಜನೆ | 4112 | 9.60 | 3.10 | 618.20 | 630.90 |
| 8. | ಮೈಕ್ರೊ ಫೈನಾನ್ಸ್ (ಕಿರು ಸಾಲ) ಯೋಜನೆ | 24773 | 1238.67 | 1238.67 | - | 2477.34 |
| | **ಒಟ್ಟು** | **47942** | **15527.84** | **1852.28** | **5287.07** | **22667.19** |

2012-13ರ ಆರ್ಥಿಕ ವರ್ಷದಲ್ಲಿ ಪ.ಜಾತಿ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾದ ಪ್ರಮುಖ ಯೋಜನೆಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ಹಾಗೂ ಸಾಧಿಸಿದ ಗುರಿಗಳನ್ನು ಈ ಮುಂದೆ ನೀಡಲಾಗಿದೆ.